**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.**

**ಸಿ.ಸಿ.ನಂ: 478/2015**

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕಿಕ್ಕೇರಿ ಪೊಲೀಸ್ ಠಾಣೆ

-ವಿರುದ್ಧ –

ಆರೋಪಿತರು ಃ- 1. ಮುರುಳಿಧರ್.ಜೆ ಬಿನ್ ಲೇಟ್ ಜಯರಾಮ, 45 ವರ್ಷ
2. ಸುಶೀಲಮ್ಮ ಕೋಂ ಲೇಟ್ ಜಯರಾಮ, 66 ವರ್ಷ
1 ಮತ್ತು 2 ನಾಗದೇವನಹಳ್ಳಿ, ಕೆಂಗೇರಿ, ಬೆಂಗಳೂರು,
ಹಾಲಿ ವಾಸಃ ಅಗ್ರಹಾರದಾಸರಹಳ್ಳಿ, ಬೆಂಗಳೂರು.
3. ಸೀತಾಲಕ್ಷ್ಮಿ ಕೋಂ ಪಿ.ಶಿವಣ್ಣ, 53 ವರ್ಷ,
4. ಶಿವಣ್ಣ ಬಿನ್ ಲೇಟ್ ಪಾಪಯ್ಯ, 63 ವರ್ಷ,
5. ಸ್ಫೂರ್ತಿ ಬಿನ್ ಪಿ.ಶಿವಣ್ಣ, 29 ವರ್ಷ,
3 ರಿಂದ 5 ರ ವಾಸಃ ಡೋರ್ ನಂ.2136, 10 ನೇ ಬ್ಲಾಕ್,
ಜನಪ್ರೀಯ ಟೌನ್, ಮಾಗಡಿ ಮೈನ್ ರೋಡ್,
ಬೆಂಗಳೂರು ಸಿಟಿ.
6. ರಾಜಣ್ಣ @ ರಾಜು ಬಿನ್ ಲೇಟ್ ನಂಜಯ್ಯ, 46 ವರ್ಷ,
ವಾಸ ಃ ಡೋರ್ ನಂ.58, 2 ನೇ ಮೈನ್ ಕಾಮಾಕ್ಷಿಪಾಳ್ಯ,
ವೃಷಭಾವತಿ ನಗರ, ಬೆಂಗಳೂರು ಸಿಟಿ.

**-:: ದೋಷಾರೋಪಣೆ ::-**

ಶ್ರೀ ಶಮೀರ್ ಪಿ. ನಂದ್ಯಾಲ್, ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೃಷ್ಣರಾಜಪೇಟೆ ಆದ ನಾನು ಮೇಲೆ ಹೇಳಿದ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.

ದಿನಾಂಕ 21-12-2014 ರಂದು 2 ಗಂಟೆ ಸಮಯದಲ್ಲಿ ಕಿಕ್ಕೇರಿ ಪೊಲೀಸ್ ಠಾಣಾ ಸರಹದ್ದಾದ ಮಾರ್ಗೋನಹಳ್ಳಿ ಗ್ರಾಮದ ಚಾಸಾ.01/ಚೈತ್ರ ಎಂ.ಪಿ ರವರ ಸೋದರ ಮಾವ ತಮ್ಮೇಗೌಡ ರವರ ವಾಸದ ಮನೆಯಲ್ಲಿ ಆರೋಪಿತರೆಲ್ಲರೂ ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ವರದಕ್ಷಿಣೆ ಆಸೆಯಿಂದ ಈ ಹಿಂದೆ ದಿನಾಂಕಃ31-08-2009 ರಂದು 1 ನೇ ಆರೋಪಿ ಚಾಸಾ.01 ರವರನ್ನು ಕೆ.ಆರ್.ಪೇಟೆ ಗೌನ್ ನಂಜಮ್ಮ ಮುದ್ದೇಗೌಡ ಸಮುದಾಯ ಭವನದಲ್ಲಿ ಹಿಂದೂ ಸಂಪ್ರದಾಯದ ಪ್ರಕಾರ ಮದುವೆ ಮಾಡಿದ್ದು, ಮದುವೆ ಕಾಲದಲ್ಲಿ ವರದಕ್ಷಿಣೆಯಾಗಿ 250 ಗ್ರಾಂ ಚಿನ್ನ, ಒಂದು ಲಕ್ಷದ 50 ಸಾವಿರ ಹಣ ಹಾಗೂ ಒಂದು ಹೀರೊ ಹೊಂಡಾ ಮೊಟಾರ್ ಬೈಕ್ ಅನ್ನು ವರದಕ್ಷಿಣೆಯಾಗಿ ಪಡೆದುಕೊಂಡು ವರದಕ್ಷಿಣೆ ಕಾಯ್ದೇ ಕಲಂ 3 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

2. ಎರಡನೆಯದಾಗಿ ಮದುವೆ ನಂತರ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು

ಈಡೇರಿಸಿಕೊಳ್ಳಲು ಮದುವೆಯಾದ ಸ್ವಲ್ಪ ದಿನಗಳ ಕಾಲ ಆರೋಪಿತರು ಚಾಸಾ.01 ರವರನ್ನು ಚೆನ್ನಾಗಿ ನೋಡಿಕೊಂಡಿದ್ದು ಮತ್ತೆ ವರದಕ್ಷಿಣೆಗಾಗಿ 3 ಲಕ್ಷ ಹಣವನ್ನು ತರುವಂತೆ ಒತ್ತಾಯ ಮಾಡಿ ವರದಕ್ಷಿಣೆ ಕಾಯ್ದೆ ಕಲಂ 4 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

3. ಮೂರನೆಯದಾಗಿ ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ಚಾಸಾ.01/ಚೈತ್ರ ರವರು 1 ಲಕ್ಷ ಹಣವನ್ನು ತವರು ಮನೆಯಿಂದ ತಂದು 1 ಮತ್ತು 2 ನೇ ಆರೋಪಿತರಿಗೆ ನೀಡಿದ್ದರೂ, ಇದು ಸಾಲದೆಂದು ಪುನಃ 5 ಲಕ್ಷ ರೂ ಹಣಕಾಗಿ ಒತ್ತಾಯ ಮಾಡುತ್ತಿದ್ದು, ಮತ್ತೆ 75 ಸಾವಿರ ರೂಪಾಯಿಗಳನ್ನು ಚಾಸಾ.01 ರವರು ತನ್ನ ತವರು ಮನೆಯಿಂದ ತಂದು ನೀಡಿದ್ದು, ಇದು ಸಲದೆಂದು ಹಾಗೂ ನಿನಗೆ ಮಕ್ಕಳಾಗದ ಕಾರಣ ಬೇರೆ ಮದುವೆ ಮಾಡುತೆತೇವೆಂದು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ಕಿರುಕುಳವನ್ನು ನೀಡಿ ಮನೆಗೆ ಕಳುಹಿಸಿದ್ದು ಭಾ.ದಂ.ಸಂ ಕಲಂ 498-ಎ ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

4. ನಾಲ್ಕನೆಯದಾಗಿ ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ಚಾಸಾ.02/ಮಂಜಮ್ಮ ರವರ ಮನೆಗೆ ಪಂಚಾಯ್ತಿ ಮಾಡಲೆಂದು ಸೇರಿ ಪಂಚಾಯ್ತಿ ಮಾಡುತ್ತಿದ್ದಾಗ ಚಾಸಾ. ನಿಮ್ಮಲ್ಲಿ 2 ನೇ ಆರೋಪಿಯ ಚಿತಾವಣೆಯಿಂದ 1 ನೇ/ಚೈತ್ರ ಲಕ್ಷ ಹಣ ನೀಡದೇ ಹೋದರೆ ಮನೆಗೆ ಸೇರಿಸುವುದಿಲ್ಲವೆಂದು ರವರಿಗೆ ಸೌಭಾಗ್ಯರವರನ್ನು ಉದ್ದೇಶಿಸಿ ಏನೆ ಮುಂಡೆನೇ ಆರೋಪಿಯವರು ಚಾಸಾ.1 ಮತ್ತು 02 ರವರಿಗೆ ಬಾಯಿಗೆ ಬಂದಂತೆ ಬೈದು, ಭಾ.ದಂ.ಸಂ ಕಲಂ 504 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

5. ಐದನೆಯದಾಗಿ ಮೇಲ್ಕಾಣಿಸಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ನಿಮ್ಮಲ್ಲಿ 2 ಮತ್ತು 3 ನೇ ಆರೋಪಿತರು ಚಾಸಾ.01/ಚೈತ್ರ ರವರನ್ನು ಎಳೆದಾಡಿ ಕೈಯಿಂದ ಹೊಡೆದು, 5 ನೇ ಆರೋಪಿಯು ಚಾಸಾ.01 ರವರ ಬಲ ಕಪಾಲಕ್ಕೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ಭಾ.ದಂ.ಸಂ ಕಲಂ 323 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

6. ಆರನೆಯದಾಗಿ ಮೇಲ್ಕಾಣಿಸಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು ನಿಮ್ಮಲ್ಲಿ 4 ನೇ ಮತ್ತು 6 ನೇ ಆರೋಪಿತರು ನಮ್ಮ ಮನೆಗೆ ಕಳುಹಿಸಿದರೇ ಕೊಲೆ ಮಾಡುತ್ತೇವೆಂದು ಕೊಲೆ ಬೆದರಿಕೆ ಹಾಕಿ ಪ್ರಾಣಭಯವನ್ನುಂಟು ಮಾಡಿ ಭಾ.ದಂ.ಸಂ ಕಲಂ 506 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ

ಎಂದು,

ಮೇಲ್ಕಾಣಿಸಿದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1ಃ ಮೇಲೆ ಹೇಳಿದ ಅಂಶಗಳು ನಿಮಗೆ ಅರ್ಥವಾಗಿದೆಯೇ?

ಉಃ

ಪ್ರ-2ಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉಃ

ಮೇಲ್ಕಂಡ ವಿಷಯವನ್ನು ಆರೋಪಿತರಿಗೆ ಓದಿ ಹೇಳಿ ಸರಿಯೆಂದು ಒಪ್ಪಿದ್ದು ಅದರಂತೆ ಹೇಳಿಕೆ ಮಾಡಿಕೊಂಡಿದ್ದೇನೆ.

ದಿ: 06-06-2022

ಹಿರಿಯ ಸಿವಿಲ್ ನ್ಯಾಯಾಧೀಶರು ಕೆ.ಆರ್.ಪೇಟೆ.
ಮತ್ತು ಜೆ.ಎಂ.ಎಫ್.ಸಿ, ಕೃಷ್ಣರಾಜಪೇಟೆ.